ದ. ಕನ್ನಡ ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಷೆಡ್ಡುಗಳು

562 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆರೆದಿರುವ ಸಣ್ಣ ಕೈಗಾರಿಕಾ ಷೆಡ್ಡುಗಳ ಸಂಖ್ಯೆ ಎಷ್ಟು? ಮತ್ತು ಎಲ್ಲಿ ತೆಗೆಯಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)*

ಆ) *ಇದಕ್ಕೆ ಈ ಹಿಂದೆ ಸರ್ಕಾರವು ನಿಗದಿಪಡಿಸಿದ ಕ್ರಯವೆಷ್ಟು; ಮತ್ತು ಇಂದು ನಿಗದಿಪಡಿಸಿದ ಕ್ರಯವೆಷ್ಟು?*

ಇ) *ಈ ಶೆಡ್ಡುಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ? (ತಾಲ್ಲೂಕುವಾರು ವಿವರ ನೀಡುವುದು)*

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) ;

ಅ) 348 (ತಾಲ್ಲೂಕುವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ)

ಆ) ವಿವರಗಳನ್ನು ಅನುಬಂಧ-11 ರಲ್ಲಿ ನೀಡಲಾಗಿದೆ.

ಇ) ತಾಲ್ಲೂಕುವಾರು ವಿವರಗಳನ್ನು ಅನುಬಂಧ-III ರಲ್ಲಿ ನೀಡಲಾಗಿದೆ.

ANNEXURE - I

DETAILS OF KSSIDC INDUSTRIAL SHEDS AT DAKSHINA KANNADA EXISTING AS AT 31.07.1997

DISTRICT	TALUK	SL. NO.	INDUSTRIAL ESTATE	TYPE AND NUMBER OF SHEDS								
				A	SPL A	B	SPL B	C	D	M	SM	TOTAL
1	2	3	4									
DAKSHINA KANNADA	1. MANGALORE	1	YEYYADI	-	-	3	-	33	6	8	8	58
		2	BAIKAMPADY	-	-	39	-	65	34	30	24	182
		3	MULKI	-	-	-	-	2	-	-	14	16
			TOTAL	**0**	**0**	**42**	**0**	**100**	**40**	**28**	**46**	**256**
	2. KUNDAPUR	1.	KOTESHWAR	-	-	-	-	5	3	-	4	12
			TOTAL	**0**	**0**	**0**	**0**	**5**	**3**	**0**	**4**	**12**
	3. UDUPI	1.	MANIPAL	-	-	12	-	16	4	14	6	52
			TOTAL	**0**	**0**	**12**	**0**	**16**	**4**	**14**	**6**	**52**
	4. BELTHANGADI	1.	BELTHANGADI	-	-	-	-	3	-	-	7	10
			TOTAL	**0**	**0**	**0**	**0**	**3**	**0**	**0**	**7**	**10**
	5. KARKALA	1.	KARKALA	-	-	2	-	-	8	-	-	10
		2.	MOODABIDRI	-	-	-	-	4	4	-	-	8
			TOTAL	**0**	**0**	**2**	**0**	**4**	**12**	**0**	**0**	**18**
	6. SULYA			-	-	-	-	-	-	-	-	-
	7. BANTWAL			-	-	-	-	-	-	-	-	-
	8. PUTTUR			-	-	-	-	-	-	-	-	-
			GRAND TOTAL	**0**	**0**	**56**	**0**	**128**	**59**	**42**	**63**	**348**

ANNEXURE - II

STATEMENT SHOWING THE COST OF SHEDS CONSTRUCTED IN VARIOUS INDUSTRIAL ESTATE IN SOUTH KANARA DISTRICT DURING THE YEAR 1994-95 AND THE YEAR 1995-96

SL. NO.	TALUK	INDUSTRIAL ESTATE	TYPE OF SHED	PREVIOUS COST (RS. IN LAKHS)	PRESENT COST
1.	MANGALORE	YEYYADI	B	- (*)	689550.00
			C	- (*)	449100.00
			D	RENTAL SHEDS	
			SM	103165.00	204730.00
			M	RENTAL SHEDS	
		BYKAMPADY	B	601740.40	908103.00
			C	391890.00	577870.00
			D	174200.00	- (**)
			SM	- (*)	242414
			M	RENTAL SHEDS	
		MULKI	B	- (*)	765589.00
			C	- (*)	497860.0
			SM	- (*)	193000.00
2.	KUNDAPURA	KOTESWARA	C	382560.00	478700.00
			D	213430.00	- (**)
3.	UDUPI	MANIPAL	B	279200.00	871600.00
			C	193640.00	557240.00
			D	RENTAL SHEDS	
			SM	131180.00	206590.00
			M	RENTAL SHEDS	
4.	BELTHANGADI	BELTHANGADI	C	- (*)	497869.00
			SM	- (*)	184590.00
5.	KARKALA	KARKALA	B	160109.00	- (**)
			D	98511.00	- (**)
		MOODABIDRI	C	158535.00	- (**)
			D	106957.00	- (**)

Note: (*) No. Construction of sheds in earlier years.

(*) No. Construction of sheds in recent years

ANNEXURE - III

ಮಳಿಗೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿದ ಬಗ್ಗೆ ವಿವರಗಳು

I	**ಮಂಗಳೂರು ತಾಲ್ಲೂಕು :**		
1.	ಕೈ. ವ. ಯಯ್ಯಾಡಿ	...:	ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.
2.	ಕೈ. ವ. ಬೈಕಂಪಾಡಿ	....	ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.
3.	ಕೈ. ವ. ಮುಲ್ಕಿ-ಕಾರ್ನಾಡ್	....	ಹೊಸದಾಗಿ ಕೈ.ವ. ಸ್ಥಾಪನೆಯಾಗಿ ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸಲಾಗಿದೆ. ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
II.	**ಉಡುಪಿ ತಾಲ್ಲೂಕು :**		
1.	ಕೈ. ವ. ಮಣಿಪಾಲ	....	ಮೂಲಭೂತ ಸೌಕರ್ಯ ಒದಗಿಸಲಾಗಿದೆ.
III.	**ಕಾರ್ಕಳ ತಾಲ್ಲೂಕು :**		
1.	ಕೈ. ವ. ಕಾರ್ಕಳ	....	ಮೂಲಭೂತ ಸೌಕರ್ಯ ಒದಗಿಸಲಾಗಿದೆ.
2.	ಕೈ. ವ. ಮೂಡಬಿದ್ರೆ	....	ಮೂಲಭೂತ ಸೌಕರ್ಯ ಒದಗಿಸಲಾಗಿದೆ.
IV.	**ಕುಂದಾಪುರ ತಾಲ್ಲೂಕು :**		
1.	ಕೈ. ವ. ಕೋಟೇಶ್ವರ	....	ಮೂಲಭೂತ ಸೌಕರ್ಯ ಒದಗಿಸಲಾಗಿದೆ.
V.	**ಬೆಳ್ತಂಗಡಿ ತಾಲ್ಲೂಕು :**		
1.	ಕೈ. ವ. ಬೆಳ್ತಂಗಡಿ	....	ಹೊಸದಾಗಿ ಕೈ.ವ. ಸ್ಥಾಪನೆಯಾಗಿದ್ದು ಕೈಗಾರಿಕಾ ಶೆಡ್ಡುಗಳನ್ನು ನಿರ್ಮಿಸಲಾಗಿದೆ. ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಪ್ರತಾಪಚಂದ್ರಶೆಟ್ಟಿ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆರೆದಿರುವ ಸಣ್ಣ ಕೈಗಾರಿಕಾ ಶೆಡ್ಡುಗಳ ಸಂಖ್ಯೆ ಎಷ್ಟು ಮತ್ತು ಎಲ್ಲಿ ತೆರೆಯಲಾಗಿದೆ ಎಂದು ಕೇಳಿದ್ದಕ್ಕೆ 348 ಎಂದು ಹೇಳಿದ್ದಾರೆ. 348 ಶೆಡ್ಡುಗಳನ್ನು ಸಣ್ಣ ಕೈಗಾರಿಕೆಗಳ ಮಾಲೀಕರು ಖರೀದಿಸಿದ್ದಾರಾ? ಎಷ್ಟರಲ್ಲಿ ಕಾರ್ಯನಿರ್ವಹಿಸುತ್ತಿವೆ? ಎಷ್ಟು ಖಾಲಿ ಇವೆ? ಅದರ ಬಗ್ಗೆ ಉತ್ತರ ಕೊಡಿ. ಹಾಗೆ ಹಿಂದೆ ಹಾಗೂ ಈಗ ಈ ಶೆಡ್ಡುಗಳ ದರಕ್ಕೆ ಬಹಳಷ್ಟು ವ್ಯತ್ಯಾಸ ಇದೆ. ಈಗ ಮಾರಾಟ ಆಗದೇ ಇರತಕ್ಕಂಥ ಶೆಡ್ಡುಗಳನ್ನು ಹಿಂದಿನ ದರದಲ್ಲಿ ಅಥವಾ ದರ ಕಡಿಮೆ ಮಾಡಿ ಕೊಡತಕ್ಕಂಥ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಆಗುತ್ತದೆಯೇ ಮತ್ತು ಮೂಲಭೂತ ಸೌಲಭ್ಯಗಳ ಬಗ್ಗೆ ಕೇಳಿದ್ದೆ. ಅದಕ್ಕೆ ಕೆಲವು ಕಡೆ ಒದಗಿಸಿಲ್ಲ ಎಂದು

ಉತ್ತರ ಕೊಟ್ಟಿದ್ದೀರಿ. ಆದರೆ ಮೂಲಭೂತ ಸೌಲಭ್ಯಗಳು ವ್ಯವಸ್ಥಿತವಾಗಿ ಉಪಯೋಗಕ್ಕೆ ಬಾರದೇ ಇರತಕ್ಕಂಥದ್ದು. ಏಕೆಂದರೆ ಒಂದು ಕಡೆ ಬೋರ್‌ವೆಲ್ ತೋಡಿ ನೀರು ಕೊಡುತ್ತೀರಿ. ಆದರೆ ಅಲ್ಲಿ ಪೋಟರ್ ಕೆಟ್ಟು ಹೋದರೆ ಪುನಃ ಎಲ್ಲಿಂದ ಬರಬೇಕು? ಅದನ್ನು ಸರಿಪಡಿಸತಕ್ಕಂಥ ವ್ಯವಸ್ಥೆ ಏನು ಎನ್ನತಕ್ಕಂಥದ್ದನ್ನು ಕೇಳಬಯಸುತ್ತೇನೆ.

ಶ್ರೀ ಬಿ. ಎ. ಮೊಯ್ದೀನ್ : ಮಾನ್ಯ ಅಧ್ಯಕ್ಷರೆ, 348 ಶೆಡ್ಡುಗಳಲ್ಲಿ ಬೈಕಂಪಾಡಿ ಮತ್ತು ಮಂಗಳೂರಿನಲ್ಲಿ ಯಾವುದೂ ಖಾಲಿ ಇಲ್ಲ. ಹಾಗೆ ಮಣಿಪಾಲದಲ್ಲೂ ಖಾಲಿ ಇಲ್ಲ. ನಿಮ್ಮ ಕ್ಷೇತ್ರವಾದ ಕುಂದಾಪುರದಲ್ಲಿ ಸುಮಾರು ನಾಲ್ಕು ಶೆಡ್ಡುಗಳು ಖಾಲಿ ಇವೆ. ಮತ್ತು ಮೂಲಭೂತ ಸೌಲಭ್ಯಗಳ ಬಗ್ಗೆ ತಾವು ಕೇಳಿದ್ದೀರಿ, ಮೂಲಭೂತ ಸೌಲಭ್ಯಗಳಲ್ಲಿ ನೀರು, ರಸ್ತೆ ಮತ್ತು ವಿದ್ಯುಚ್ಛಕ್ತಿ ಮುಂತಾದವುಗಳನ್ನು ನಾವು ಈ ವಸಾಹತ್ತುಗಳಿಗೆ ಒದಗಿಸಬೇಕು ಒದಗಿಸಿದ್ದೇವೆ. ಇನ್ನು ಇದರ ಬಗ್ಗೆ ಮೆಂಟೆನೆನ್ಸ್ ಕೂಡ ನಾವೇ ಮಾಡುತ್ತಿದ್ದೇವೆ. ಈಗ ನಾವು ಒಂದು ಹೊಸ ಕಾರ್ಯಕ್ರಮವನ್ನೂ ಕೂಡ ಇಟ್ಟುಕೊಂಡಿದ್ದೇವೆ. ವಸಾಹತ್ತಿನ ಸ್ಥಳೀಯರಾಗಿರತಕ್ಕಂಥ ಅಸೋಸಿಯೇಷನ್‌ನವರು ವಹಿಸಿಕೊಂಡರೆ ಅವರಿಗೆ ಬಿಟ್ಟು ಕೊಡತಕ್ಕಂಥ ಒಂದು ವ್ಯವಸ್ಥೆಯ ಒಂದು ಕಾರ್ಯಕ್ರಮವನ್ನು ನಾವು ಜಾರಿಗೆ ತರುವುದರಲ್ಲಿ ಇದ್ದೇವೆ. ಅದನ್ನು ಪ್ರಾಯೋಗಿಕವಾಗಿ ನಮ್ಮಲ್ಲಿರುವಂಥ ಪೀಣ್ಯಾ ಇಂಡಸ್ಟ್ರೀಯಲ್ ಎಸ್ಟೇಟ್‌ನಲ್ಲಿ ಮಾಡಬೇಕೆಂದು ನಿಶ್ಚಯಿಸಿದ್ದೇವೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ : ಹೊಸ ಶೆಡ್ಡುಗಳ ಬೇಡಿಕೆ ಎಲ್ಲಿಯಾದರೂ ಬಂದಿದೆಯಾ? ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡುವ ಯೋಜನೆ ಇದೆಯೇ?

ಶ್ರೀ ಬಿ. ಎ. ಮೊಯಿದ್ದೀನ್ : ನಾವು ಮೊಫಿಷಯಲ್ ಫ್ಲೇಸ್‌ನಲ್ಲಿ ಮುಂದೆ ಯಾವುದೇ ಶೆಡ್ಡುಗಳನ್ನು ನಾವು ಕೊಡುವುದಿಲ್ಲ. ಬೆಂಗಳೂರು ಬಿಟ್ಟರೆ ನಾವು ಈಗ ಸಧ್ಯಕ್ಕೆ ಶೆಡ್ಡುಗಳನ್ನು ಕೊಡುವುದಿಲ್ಲ. ಆದರೆ ಎಲ್ಲಿ ಬೇಡಿಕೆ ಇದೆ ಅಲ್ಲಿ ನಾವು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ, ಕೈಗಾರಿಕಾ ನಿವೇಶನಗಳನ್ನು ಮಾಡಿ ಎಂಟರ್‌ಪ್ರೈನರ್ಸ್‌ಗೆ ಹಂಚಿಕೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಬೈಕಂಪಾಡಿ ಮತ್ತು ಮಂಗಳೂರಿನಲ್ಲಿ ಶೆಡ್ಡುಗಳನ್ನು ಕೊಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಕೆಲವೇ ಕೆಲವು ವ್ಯಕ್ತಿಗಳು ತಮ್ಮ ಕುಟುಂಬದವರ ಸದಸ್ಯರ ಹೆಸರಿನಲ್ಲಿ ಶೆಡ್ಡುಗಳನ್ನು ಖರೀದಿ ಮಾಡಿಕೊಂಡು ರಿಯಲ್ ಎಸ್ಟೇಟ್ ಬಿಸಿನೆಸ್ ಮಾರಾಡತಕ್ಕಂಥದ್ದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? ಈಗಲೂ ಕೂಡ ಖರೀದಿ ಮಾಡಿದ ಶೆಡ್ಡುಗಳು ಖಾಲಿ ಇರುವಂಥದ್ದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಬಿ. ಎ. ಮೊಯಿದ್ದೀನ್ : ಬೇರೆ ಬೇರೆ ವ್ಯಕ್ತಿಗಳ ಹೆಸರಿನಲ್ಲಿ ಒಂದೇ ಕುಟುಂಬದವರು ಶೆಡ್ಡುಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ ಅದು ನನ್ನ ವ್ಯಾಪಾರಿ ಸಂಸ್ಕೃತಿ ಮಾನ್ಯ ಯೋಗೀಶ್ ಭಟ್‌ರವರಿಗೆ ಇದು ಗೊತಿರಬೇಕು [illegible] ಹೊಸ ಹೊಸ ಹಣವನ್ನು

ಗಳಿಸಬೇಕೆಂಬುದೇ ವ್ಯಾಪಾರದ ಉದ್ದೇಶ. ಒಂದು ಕುಟುಂಬದಲ್ಲಿ ಇಷ್ಟೇ ಶೆಡ್ಡುಗಳನ್ನು ಕೊಡಬೇಕು ಎಂದು ನಿಯಮ ಇಲ್ಲ. ಅದು ಏನಾದರೂ ಇದ್ದರೆ ನನ್ನ ಗಮನಕ್ಕೆ ತನ್ನಿ.

ಹೀರೆಕಬ್ಬಾರ ಗ್ರಾಮದಲ್ಲಿ ಅಂಬೇಡ್ಕರ್ ಭವನ (ಮಿನಿ) ನಿರ್ಮಿಸುವ ಕುರಿತು

563 - ಶ್ರೀ ಯು. ಬಿ. ಬಣಕಾರ್(ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಿರೇಕೆರೂರು ತಾಲ್ಲೂಕು ಹೀರೆಕಬ್ಬಾರ ಗ್ರಾಮದಲ್ಲಿ ಮಿನಿ ಅಂಬೇಡ್ಕರ್ ಭವನ ಕಟ್ಟಿಸಲು ಗ್ರಾಮಸ್ಥರು ಮನವಿ ಸಲ್ಲಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಯು. ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೆ, ಹಿರೇಕೆರೂರು ತಾಲ್ಲೂಕು ಹೀರೇಕಬ್ಬಾರ ಗ್ರಾಮದಲ್ಲಿ ಮಿನಿ ಅಂಬೇಡ್ಕರ್ ಭವನ ಕಟ್ಟಿಸಲು ಗ್ರಾಮಸ್ಥರು ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಆದರೆ ನಾನು ಹಾಗೂ ಗ್ರಾಮಸ್ಥರು ಸಚಿವರಿಗೆ ಬರೆದ ಪತ್ರದಲ್ಲಿ ಸದರಿ ವಿಷಯದ ಬಗ್ಗೆ ಕೋರಿಕೊಂಡಿದ್ದೆವು. ಅದಕ್ಕೆ ಉತ್ತರವಾಗಿ ಅವರು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಇಲಾಖೆಗೆ ಪತ್ರ ಬರೆದಿದ್ದಾರೆ. ನಾವು ಯಾವ ರೀತಿ ಸರ್ಕಾರದ ಗಮನಕ್ಕೆ ತರಬೇಕು? ಇದು ಮೊದಲನೆಯದು. ಇನ್ನು ಎರಡನೆಯದು 1997-98ನೇ ಸಾಲಿನಲ್ಲಿ ಅಂಬೇಡ್ಕರ್ ಭವನವನ್ನು ಕೊಡಲು ಸರ್ಕಾರ ಏನು ಕ್ರಮ ಹಾಕಿಕೊಂಡಿದೆ ಎನ್ನುವುದನ್ನು ಕೇಳಬಯಸುತ್ತೇನೆ. ಏಕೆಂದರೆ ಇವೊತ್ತು ಪರಿಶಿಷ್ಟ ಕಾಲೋನಿಗಳಲ್ಲಿ ವಾಸಿಸುವಂಥ ಗ್ರಾಮಸ್ಥರಿಗೆ ಮಿನಿ ಅಂಬೇಡ್ಕರ್ ಭವನಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ತೆಗೆದುಕೊಂಡಿದೆ ಮತ್ತು ನಮ್ಮ ಮನವಿಯನ್ನು ಪರಿಗಣನೆಗೆ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಅಂಬೇಡ್ಕರ್ ಭವನಗಳನ್ನು ಕಟ್ಟುವಾಗ ಹಿಂದೆ ಕೇವಲ ಮೂರು ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಕಟ್ಟತಕ್ಕಂಥ ಒಂದು ವಿನ್ಯಾಸ ಇತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ಮೂರು ಲಕ್ಷದಲ್ಲಿ ಅಂಬೇಡ್ಕರ್ ಭವನವನ್ನು ಕಟ್ಟುವುದು ತುಂಬಾ ಕಷ್ಟ ಎಂದು ಅನೇಕ ಸದಸ್ಯರುಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದಕಾರಣ ಇದನ್ನು ಐದು ಲಕ್ಷ ರೂಪಾಯಿಗಳಿಗೆ ಏರಿಸಬೇಕೆಂದು ಸರ್ಕಾರದ ಪರಿಶೀಲನೆಯಲ್ಲಿದೆ. ತಾಲ್ಲೂಕು ಮಟ್ಟದಲ್ಲಿ ಹತ್ತು ಲಕ್ಷ ರೂಪಾಯಿ, ಜಿಲ್ಲಾ ಮಟ್ಟದಲ್ಲಿ ಇಪ್ಪತ್ತೈದು ಲಕ್ಷ ರೂಪಾಯಿ ಮಾಡಬೇಕೆಂದು ಇದೆ. ಹಣದ ಪರಿಸ್ಥಿತಿಯನ್ನು ನೋಡಿಕೊಂಡು ನಿಮ್ಮ ಬೇಡಿಕೆ ಏನು ಇದೆ ಆ ಪತ್ರದ ಆಧಾರದ ಮೇಲೆ ಈ ಸಾರಿ ಮಂಜೂರಾತಿ ಮಾಡುವ ಕಾಲದಲ್ಲಿ ಮಂಜೂರಾತಿ ಮಾಡುವ ವ್ಯವಸ್ಥೆ ಮಾಡುತ್ತೇನೆ.